ಪತ್ರಿಕಾ ತುಣುಕು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT
ಪತ್ರಿಕೆಯ ಹೆಸರು : NAME OF THE NEWS PAPER
ದಿನಾಂಕ : DATE

### ಉನ್ನಾವೋ ಯುವತಿ ಅಪಹರಣ, ಅತ್ಯಾಚಾರ ಪ್ರಕರಣ: ಸಹ ಆರೋಪಿ ಶಶಿ ಸಿಂಗ್ ಖುಲಾಸೆ

# ಶಾಸಕ ಕುಲದೀಪ್ ಸಿಂಗ್ ತಪ್ಪಿತಸ್ಥ, 19ಕ್ಕೆ ಶಿಕ್ಷೆ ಪ್ರಕಟ

ನವದೆಹಲಿ: ಉತ್ತರ ಪ್ರದೇಶದ ಉನ್ನಾವೊದಲ್ಲಿ 2017ರಲ್ಲಿ ನಡೆದ ಯುವತಿ ಅಪಹರಣ ಮತ್ತು ಅತ್ಯಾಚಾರ ಪ್ರಕರಣದಲ್ಲಿ ಬಿಜೆಪಿಯ ಉಚ್ಚಾಟಿತ ಶಾಸಕ ಕುಲದೀಪ್ ಸಿಂಗ್ ಸೆಂಗಾರ್ ತಪ್ಪಿತಸ್ಥನೆಂದು ದೆಹಲಿಯ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಸೋಮವಾರ ತೀರ್ಪು ನೀಡಿದೆ. ಶಿಕ್ಷೆ ಪ್ರಮಾಣವನ್ನು ಗುರುವಾರಕ್ಕೆ ಕಾದಿರಿಸಿದೆ. ಪ್ರಕರಣದ ಇನ್ನೊಬ್ಬ ಆರೋಪಿ ಶಶಿ ಸಿಂಗ್‌ನನ್ನು ಖುಲಾಸೆಗೊಳಿಸಿದೆ.

ಸಾರ್ವಜನಿಕ ಸೇವಕನೊಬ್ಬ ಬಾಲಕಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯವೆಸಗಿರುವುದು ಸಾಬೀತಾಗಿದೆ ಎಂದು ನ್ಯಾಯಾಧೀಶ ಧರ್ಮೇಶ್ ಶರ್ಮಾ ಹೇಳಿದ್ದಾರೆ. ತನಿಖೆ ವಿಳಂಬ ಮಾಡಿದ್ದಕ್ಕೆ ಉತ್ತರ ಪ್ರದೇಶದ ಪೊಲೀಸರು ಮತ್ತು ಸಿಬಿಐ ಅಧಿಕಾರಿಗಳ ಬಗ್ಗೆ ಜಡ್ಜ್ ಅಸಮಾಧಾನ ವ್ಯಕ್ತಪಡಿಸಿದರು. 17 ವರ್ಷದ ಯುವತಿಯನ್ನು ಅಪಹರಿಸಿ ಅತ್ಯಾಚಾರ ನಡೆಸಿದ್ದ ಆರೋಪ ಎದುರಿಸುತ್ತಿದ್ದ ಸೆಂಗಾರ್, ಉತ್ತರ ಪ್ರದೇಶದ ಬಂಗೆರ್‌ಮಾ ಕ್ಷೇತ್ರದಿಂದ ನಾಲ್ಕನೇ ಬಾರಿಗೆ ಚುನಾಯಿತರಾಗಿದ್ದರು. ಅತ್ಯಾಚಾರ ಪ್ರಕರಣ ಹಿನ್ನೆಲೆಯಲ್ಲಿ ಅವರನ್ನು ಇದೇ ಆಗಸ್ಟ್‌ನಲ್ಲಿ ಬಿಜೆಪಿಯಿಂದ ಉಚ್ಚಾಟಿಸಲಾಗಿತ್ತು.



## ಪ್ರಕರಣದ ಘಟನಾವಳಿ

- 2017 ಜೂನ್ 4: ಶಾಸಕ ಕುಲದೀಪ್ ಸಿಂಗ್ ಸೆಂಗಾರ್‌ನಿಂದ 17 ವರ್ಷದ ಹುಡುಗಿ ಅಪಹರಣ, ಅತ್ಯಾಚಾರ. ಸಹವರ್ತಿ ಶಶಿ ಸಿಂಗ್ ಕೂಡ ಆರೋಪಿ.
- 2018 ಏಪ್ರಿಲ್ 3: ಸೆಂಗಾರ್ ಕುಮ್ಮಕ್ಕಿನಿಂದ ಸಂತ್ರಸ್ತೆಯ ತಂದೆ ಮೇಲೆ ದುಷ್ಕರ್ಮಿಗಳಿಂದ ಹಲ್ಲೆ. ಶಸ್ತ್ರಾಸ್ತ್ರ ಕಾಯಿದೆಯಡಿ ಸುಳ್ಳು ಪ್ರಕರಣದಲ್ಲಿ ಬಂಧನ.
- ಏಪ್ರಿಲ್ 8: ಪೊಲೀಸ್ ನಿಷ್ಕ್ರಿಯತೆ ಆರೋಪಿಸಿ ಸಂತ್ರಸ್ತೆಯಿಂದ ಸಿಎಂ ಆದಿತ್ಯನಾಥ್ ಮನೆ ಮುಂದೆ ಆತ್ಮಾಹುತಿ ಯತ್ನ.
- ಏಪ್ರಿಲ್ 9: ಯುವತಿ ತಂದೆ ಪೊಲೀಸ್ ಕಸ್ಟಡಿಯಲ್ಲಿ ಸಾವು.
- ಏಪ್ರಿಲ್ 10: ರೇಪ್ ಪ್ರಕರಣದ ತನಿಖೆ ಸಿಬಿಐಗೆ ವರ್ಗಾಯಿಸಿದ ಅಲಹಾಬಾದ್ ಹೈಕೋರ್ಟ್.
- ಏಪ್ರಿಲ್ 13: ಶಾಸಕ ಸೆಂಗಾರ್ ಬಂಧನ.
- ಜುಲೈ 11: ಸಿಬಿಐನಿಂದ ಆರೋಪಪಟ್ಟಿ ದಾಖಲು.
- 2019 ಜುಲೈ 12: ಸೆಂಗಾರ್ ಮತ್ತಿತರರಿಂದ ಜೀವಭಯವೆಂದು ಸಿಜೆಐಗೆ ಸಂತ್ರಸ್ತ ಯುವತಿ ಪತ್ರ.
- ಜು.28: ಸಂತ್ರಸ್ತೆ ಪ್ರಯಾಣಿಸುತ್ತಿದ್ದ ಕಾರಿಗೆ ರಾಯ್‌ಬರೇಲಿಯಲ್ಲಿ ಟ್ರಕ್ ಡಿಕ್ಕಿ. ಯುವತಿಯ ಇಬ್ಬರು ಚಿಕ್ಕಮ್ಮಂದಿರ ಸಾವು. ಯುವತಿ, ವಕೀಲನಿಗೆ ಗಂಭೀರ ಗಾಯ.
- ಜುಲೈ 29: ಅಪಘಾತ ಸಂಬಂಧ ಸೆಂಗಾರ್ ಮತ್ತು ಇತರ 9 ಮಂದಿ ವಿರುದ್ಧ ಎಫ್‌ಐಆರ್ ದಾಖಲು.
- ಜುಲೈ 31: ಸಿಜೆಐಗೆ ಸಂತ್ರಸ್ತೆಯ ಪತ್ರವನ್ನು ದೂರು ಅರ್ಜಿ ಎಂದು ಪರಿಗಣಿಸಿದ ಸಿಜೆಐ
- ಆ.1: ಸಂತ್ರಸ್ತೆಗೆ ಸಂಬಂಧಿಸಿದ 5 ಕೇಸ್ ದೆಹಲಿಗೆ ವರ್ಗ
- ಆ.5: ಲಖನೌನಿಂದ ದೆಹಲಿ ಏಮ್ಸ್‌ಗೆ ಸಂತ್ರಸ್ತೆ ಸ್ಥಳಾಂತರ.
- ಆಗಸ್ಟ್ 9: ಸೆಂಗಾರ್ ವಿರುದ್ಧ ಆರೋಪ ನಿಗದಿಪಡಿಸಿದ ಕೋರ್ಟ್.
- ಸೆಪ್ಟೆಂಬರ್ 11: ಸಂತ್ರಸ್ತೆ ಹೇಳಿಕೆ ಪಡೆಯಲು ಆಸ್ಪತ್ರೆಯನ್ನೆ ತಾತ್ಕಾಲಿಕ ಕೋರ್ಟನ್ನಾಗಿ ಪರಿವರ್ತನೆ.
- ಸೆಪ್ಟೆಂಬರ್ 25: ಏಮ್ಸ್‌ನಿಂದ ಯುವತಿ ಡಿಸ್ಚಾರ್ಜ್.
- ಡಿಸೆಂಬರ್ 6: ಮಹಿಳಾ ಆಯೋಗ ವ್ಯವಸ್ಥೆ ಮಾಡಿದ ದೆಹಲಿಯ ಬಾಡಿಗೆ ಮನೆಯಲ್ಲಿ ಸಂತ್ರಸ್ತೆ ವಾಸ.
- ಡಿಸೆಂಬರ್ 10: ತೀರ್ಪು ಕಾದಿರಿಸಿದ ಕೋರ್ಟ್.

## ರೇಪ್ ಕೇಸ್ ಶೀಘ್ರ ಇತ್ಯರ್ಥಕ್ಕೆ ಸಮಿತಿ

ಅತ್ಯಾಚಾರ ಪ್ರಕರಣಗಳ ವಿಚಾರಣೆಯನ್ನು ಚುರುಕಿನಿಂದ ನಡೆಸಿ, ಶೀಘ್ರ ಇತ್ಯರ್ಥ ಪಡಿಸುವ ಬಗ್ಗೆ ನಿಗಾವಹಿಸಲು ಸಿಜೆಐ ಬೊಬ್ಡೆ ಸಮಿತಿ ರಚಿಸಿದ್ದು, ನ್ಯಾ.ಸುಭಾಷ್ ರೆಡ್ಡಿ ಮತ್ತು ನ್ಯಾ. ಎಂ.ಆರ್.ಶಾರನ್ನು ನೇಮಿಸಿದ್ದಾರೆ.

**ವಿಚಾರಣೆ ಇಂದು:** ನಿರ್ಭಯಾ ಪ್ರಕರಣದಲ್ಲಿ ಗಲ್ಲು ಶಿಕ್ಷೆಗೆ ಒಳಗಾಗಿರುವ ನಾಲ್ವರು ತಪ್ಪಿತಸ್ಥರ ಪೈಕಿ ಅಕ್ಷಯ್ ಕುಮಾರ್ ಸಿಂಗ್ ಸಲ್ಲಿಸಿರುವ ಮರುಪರಿಶೀಲನೆ ಅರ್ಜಿ ವಿಚಾರಣೆಯನ್ನು ಸುಪ್ರೀಂಕೋರ್ಟ್ ಮಂಗಳವಾರ ನಡೆಸಲಿದೆ.

**ರೇಪ್ ಕೇಸ್ ಶೇ.32 ಮಾತ್ರ ಇತ್ಯರ್ಥ:** ಅತ್ಯಾಚಾರ ಪ್ರಕರಣಗಳಲ್ಲಿ ಶೇ. 32.2ರಷ್ಟು ಕೇಸ್‌ಗಳು ಮಾತ್ರ ಶಿಕ್ಷೆ ಹಂತಕ್ಕೆ ಬಂದಿವೆ. 2017ರಲ್ಲಿ 1,46,201 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದವು. ಈ ಪೈಕಿ 5,822 ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲಾತಿ ಬ್ಯುರೊ ತಿಳಿಸಿದೆ. ಅತ್ಯಾಚಾರ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಕೆ ಪ್ರಮಾಣದಲ್ಲೂ ಕುಸಿತವಾಗಿದೆ. 2013ರಲ್ಲಿ ಶೇ. 95.4 ಇದ್ದ ದೋಷಾರೋಪ ಪಟ್ಟಿ ಸಲ್ಲಿಕೆಯು 2017ರ ಹೊತ್ತಿಗೆ ಶೇ. 86.6ಕ್ಕೆ ಇಳಿಕೆಯಾಗಿದೆ.